ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ಸರ್ಕಾರ

ನಂ 16-ಡಿ, 3ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ
ದೇವರಾಜ ಅರಸು ಭವನ, ವಸಂತನಗರ, ಬೆಂಗಳೂರು - 560052 080-22374836
ಇ-ಮೇಲ್- bcdbng@kar.nic.in

BCWD-11038/10/2017-BCWD_ADMIN-BCWD

ದಿನಾಂಕ: 30/11/2017

## ಅಧಿಕೃತ ಜ್ಞಾಪನ

ವಿಷಯ: ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿ: 9.2.2017ರ ತೀರ್ಪಿನ ಹಿನ್ನಲೆಯಲ್ಲಿ ಹೊರಡಿಸಿದ್ದ ತಾತ್ಕಾಲಿಕ ಪದಕ್ರಮ ಪಟ್ಟಿಯನ್ನು ಅಂತಿಮಗೊಳಿಸುವ ಬಗ್ಗೆ.

ಉಲ್ಲೇಖ:
1. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 182 ಸೇನೆನಿ 2011, ದಿ: 6.5.2017
2. ಸರ್ಕಾರದ ಪತ್ರ ಸಂಖ್ಯೆ: ಹಿಂವಕ 232 ಬಿಇಟಿ 2017, ದಿ: 12.5.2017
3. ಈ ಕಛೇರಿ ಸಮಸಂಖ್ಯೆ ಅ ಜ್ಞಾ ಪತ್ರಗಳು ದಿನಾಂಕ: 15/11/2017

--

ಉಲ್ಲೇಖ(1)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅನಧಿಕೃತ ಟಿಪ್ಪಣಿಯಲ್ಲಿ ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿ: 9.2.2017ರ ತೀರ್ಪಿನ ಹಿನ್ನಲೆಯಲ್ಲಿ ಜೇಷ್ಠತಾ ಪಟ್ಟಿಯನ್ನು ಮೂರು ತಿಂಗಳೊಳಗಾಗಿ ಪರಿಷ್ಕರಿಸಲು ನಿರ್ದೇಶನ ನೀಡಿರುತ್ತದೆ. ಅದರಂತೆ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ದಿನಾಂಕ: 6.5.2017ರ ಸರ್ಕಾರದ ಆದೇಶದಲ್ಲಿ ಮಾರ್ಗದರ್ಶನ ನೀಡಲಾಗಿರುತ್ತದೆ. ಈ ಬಗ್ಗೆ ಮುಂದಿನ ಅಗತ್ಯ ಕ್ರಮ ವಹಿಸಲು ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಅನುಬಂಧಗಳಲ್ಲಿ ಸಿದ್ಧಪಡಿಸಿ ಉಲ್ಲೇಖ(3)ರ ಅಧಿಕೃತಜ್ಞಾಪನಗಳಲ್ಲಿ ಪ್ರಕಟಿಸಿ, ಯಾವುದಾದರೂ ಆಕ್ಷೇಪಣೆಗಳು ಇದ್ದಲ್ಲಿ 15 ದಿನಗಳೊಳಗಾಗಿ ಸಲ್ಲಿಸಲು ತಿಳಿಸಲಾಗಿರುತ್ತದೆ.

ಸದರಿ ಪಟ್ಟಿಗಳಿಗೆ ಈ ಕಛೇರಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತಿಯಾಗಿರುವುದಿಲ್ಲವಾದ್ದರಿಂದ, ಉಲ್ಲೇಖ(3)ರಲ್ಲಿ ಹೊರಡಿಸಿರುವ ತಾತ್ಕಾಲಿಕ ಪದಕ್ರಮ ಪಟ್ಟಿಗಳನ್ನು ಅಂತಿಮಗೊಳಿಸಿ ಹೊರಡಿಸಬೇಕಾಗಿದೆ.

ಅದರಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ನೌಕರರ ಪದಕ್ರಮ ಪಟ್ಟಿಯನ್ನು ಅನುಬಂಧಗಳಲ್ಲಿರುವಂತೆ ಅಂತಿಮಗೊಳಿಸಿ ಆದೇಶಿಸಿದೆ.

| ಕ್ರ ಸಂ | ವೃಂದ | ಅನುಬಂಧ |
|---|---|---|
| 1 | ಕಛೇರಿ ಮೇಲ್ವಿಚಾರಕರು / ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ | ಅನುಬಂಧ-1 |
| 2 | ನಿಲಯ ಪಾಲಕರು (ಪುರುಷ) | ಅನುಬಂಧ-2 |
| 3 | ನಿಲಯ ಪಾಲಕರು (ಮಹಿಳೆ) | ಅನುಬಂಧ-3 |
| 4 | ಪ್ರಥಮ ದರ್ಜೆ ಸಹಾಯಕರು | ಅನುಬಂಧ-4 |
| 5 | ನಿಲಯ ಮೇಲ್ವಿಚಾರಕರು (ಪುರುಷ) | ಅನುಬಂಧ-5 |
| 6 | ನಿಲಯ ಮೇಲ್ವಿಚಾರಕರು (ಮಹಿಳೆ) | ಅನುಬಂಧ-6 |
| 7 | ಶೀಘ್ರಲಿಪಿಗಾರರು | ಅನುಬಂಧ-7 |
| 8 | ದ್ವಿತೀಯ ದರ್ಜೆ ಸಹಾಯಕರು | ಅನುಬಂಧ-8 |
| 9 | ಬೆರಳಚ್ಚುಗಾರರು | ಅನುಬಂಧ-9 |
| 10 | ಹೊಲಿಗೆ ತರಬೇತಿ ಶಿಕ್ಷಕರು | ಅನುಬಂಧ-10 |
| 11 | ಆಶ್ರಮಶಾಲಾ ಶಿಕ್ಷಕರು (ಪುರುಷ) | ಅನುಬಂಧ-11 |
| 12 | ಆಶ್ರಮಶಾಲಾ ಶಿಕ್ಷಕರು (ಮಹಿಳೆ) | ಅನುಬಂಧ-12 |
| 13 | ಮಹಿಳಾ ಕಲ್ಯಾಣ ಕೇಂದ್ರ ಶಿಕ್ಷಕರು | ಅನುಬಂಧ-13 |
| 14 | ವಾಹನ ಚಾಲಕರು | ಅನುಬಂಧ-14 |
| 15 | ಕಿರಿಯ ನಿಲಯ ಮೇಲ್ವಿಚಾರಕರು (ಪುರುಷ) | ಅನುಬಂಧ-15 |
| 16 | ಕಿರಿಯ ನಿಲಯ ಮೇಲ್ವಿಚಾರಕರು (ಮಹಿಳೆ) | ಅನುಬಂಧ-16 |

ಸದರಿ ಪದಕ್ರಮ ಪಟ್ಟಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಬಂಧಪಟ್ಟ ನೌಕರರಿಗೆ ಪರಿಚಲಿಸಿ ( ಅನ್ಯ ಕರ್ತವ್ಯದ ಮೇಲೆ ಇತರೆ ಕಛೇರಿ / ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರನ್ನು ಒಳಗೊಂಡು), ಸ್ವೀಕೃತಿಯನ್ನು ಪಡೆದು ಈ ಕಛೇರಿಗೆ ತಪ್ಪದೇ ಕಳುಹಿಸಲು ಸೂಚಿಸಿದೆ.

(ಡಾ: ಎನ್.ವಿ.ಪ್ರಸಾದ್, ಭಾ.ಆ.ಸೇ.,)

**ಆಯುಕ್ತರು**

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

**ಬೆಂಗಳೂರು.**

**ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
2. ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
3. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು.
4. ಸಂಬಂಧಿಸಿದ ನೌಕರರಿಗೆ ಮೇಲಾಧಿಕಾರಿಗಳ ಮುಖಾಂತರ
5. ಅ.ಜ್ಞಾ.ಕಡತ/ಕಛೇರಿ ಪ್ರತಿ ಹೆಚ್ಚುವರಿ ಪ್ರತಿ